**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್:475/2014**

ಸಿಡಬ್ಲ್ಯೂ: 4
ಪಿಡಬ್ಲ್ಯೂ: 8

| | | |
|---|---|---|
| ಸಾಕ್ಷಿಯ ಹೆಸರು | : | ಲಲಿತಾ |
| ಗಂಡನ ಹೆಸರು | : | ಟಿ.ಎನ್. ನಂಜಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಬೆಂಗಳೂರು |

ಇಂದು ದಿನಾಂಕ:11.12.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಎಪಿಪಿಯವರಿಂದ:

ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಹಾಗೂ ಆ ಕುರಿತು ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು:** ಮಾನ್ಯ ಎಪಿಪಿಯವರಿಂದ:

1. ಬಿಳಗುಳ ಗ್ರಾಮದ ಹೆಸಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನನ್ನ ಗಂಡನಾದ ಚಾಸಾ-3 ರವರ ಹೆಸರಿಗೆ 60X40 ಅಡಿ ಉದ್ದದ ನಿವೇಶನ ಇತ್ತು ಎಂದರೆ ಸರಿ. ಸದರಿ ನಿವೇಶವನ್ನು ದಿನಾಂಕ:15.12.1981 ರಂದು ಹಕ್ಕುಪತ್ರ ಸಂ.208/1981-82 ರಂತೆ ತಹಶೀಲ್ದಾರ್ ಚಾಸಾ-3 ರವರ ಹೆಸರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿ ಹಳೇ ಮೂಡಿಗೆರೆ ಮಂಡಲ ಪಂಚಾಯಿತಿಯಲ್ಲಿ 63/1991-92 ರಂತೆ ಖಾತೆ ಆಗಿತ್ತು ಎಂದರೆ ಸರಿ. ತದನಂತರ ಹೆಸಗಲ್ ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬಂದು ಅಲ್ಲಿ 508/2007-8 ರಂತ ಖಾತೆಯಾಗಿ ಚಾಸಾ-3 ರವರು ತೆರಿಗೆ ಕಟ್ಟುತ್ತಿದ್ದರು ಎಂದರೆ ಸರಿ. ತದನಂತರ ಹಣಕಾಸಿನ ತೊಂದರೆಗಳಾದ ಕಾರಣ ಆ ಆಸ್ತಿಯನ್ನು ಚಾಸಾ-3 ರವರು ಚಾಸಾ-3 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ದಿನಾಂಕ:31.03.2011 ರ ಕ್ರಯಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ

1. ಚಾಸಾ-3 ರವರ ಹೆಸರಿಗೆ ಖಾತೆ ಇದ್ದ ಆಸ್ತಿಯ ಹಕ್ಕುಪತ್ರ ನಾನು ನೋಡಿದ್ದೆ. ಆ ಆಸ್ತಿಯ ಪೂರ್ವಕ್ಕೆ ರಂಗಸ್ವಾಮಿರವರ ಮನೆ, ಪಶ್ಚಿಮಕ್ಕೆ ರಹಮತ್ ರವರ ಮನೆ, ಉತ್ತರಕ್ಕೆ ಕೆಂಚಪ್ಪರಾಜುರವರ ಆಸ್ತಿ, ದಕ್ಷಿಣಕ್ಕೆ ಗೌಸ್ ಸಾಹೇಬರವರ ಮನೆ ಇತ್ತು. ಆ ಆಸ್ತಿಯ ಖಾತೆ ಬೇರೆಯವರ ಹೆಸರಿಗೆ ಬದಲಾವಣೆಯಾಗಿಲ್ಲ. ಚಾಸಾ-1 ಮತ್ತು 2 ರವರಿಗೆ ಚಾಸಾ-3 ರವರು ಆಸ್ತಿಯನ್ನು ಕೊಟ್ಟಿರಲಿಲ್ಲ. ಚಾಸಾ-3 ಅವರ ಪರವಾಗಿ ಕ್ರಯಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಆಸ್ತಿಯನ್ನು ಲಪಟಾಯಿಸಿದ್ದಾರೆಂದು ನಾವು ದೂರು ನೀಡಿಲ್ಲ. ಚಾಸಾ-1 ಮತ್ತು 2 ನನಗೆ ಹಣ ನೀಡಿಲ್ಲ. ಈ ದೂರನ್ನು ಆರೋಪಿ ನೀಡಿದ್ದಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ